ಮಾತನಾಡಿಕೊಳ್ಳತೊಡಗಿದರು.

'ಮೈ ಹಸ್ಬಂಡ್', 'ಪ್ಲೀಸ್' ಈ ಎರಡು ಶಬ್ದಗಳ ವಿನಃ ಮತ್ತೆಲ್ಲವನ್ನೂ ಆಕೆ ಕನ್ನಡದಲ್ಲೇ ಮಾತನಾಡುತ್ತಿದ್ದಳು. ''ಅವರನ್ನೇಕೆ ಕರೆತಂದಿರುವಿರಿ... ಅವರು ಅಮಾಯಕರು... ಬಿಟ್ಟುಬಿಡಿ... ಈ ಊರಲ್ಲಿ ನಾವಿಬ್ಬರೇ ಇರುವುದು...'' ಇತ್ಯಾದಿಯಾಗಿ ಪರಿ ಪರಿಯಾಗಿ ಬೇಡತೊಡಗಿದಳು. ಪೊಲೀಸರ ಅರೇಬಿಕ್ ಭಾಷೆಯ ಉತ್ತರಗಳು ಈಕೆಗೆ ಕಿಂಚಿತ್ತೂ ಅರ್ಥವಾಗುತ್ತಿರಲಿಲ್ಲ. ಆದರೆ ಅದಕ್ಕೆ ಧೃತಿಗೆಡದೇ ತಾನು ಮಾತ್ರ ಕನ್ನಡದಲ್ಲಿಯೇ ಸಂವಹಿಸುತ್ತಿದ್ದಳು. ಇವಳು ಹೇಳುತ್ತಿರುವುದೇನು ಎಂದು ಅವರಿಗೂ ಅರ್ಥವಾಗದಿದ್ದರೂ, ಆಕೆ ಒಳಗಿರುವ ಚಂದ್ರಕಾಂತನ ಹೆಂಡತಿ ಎಂಬುದನ್ನರಿಯಲು ಹೆಚ್ಚು ಸಮಯವಾಗಲಿಲ್ಲ. ಇವೆಲ್ಲ ನಡೆಯುತ್ತಿದ್ದರೂ ಚೇತನಾಳನ್ನು ಕಾರಲ್ಲಿ ಕರೆತಂದಿದ್ದವ ಸ್ಟೇಷನ್ನಿನ ಒಳಗೆ ಬರಲು ಅಂಜಿ ಹೊರಗೇ ನಿಂತಿದ್ದ.

ಒಳಗಿದ್ದ ಚಂದ್ರಕಾಂತ ಹೊರಕೋಣೆಯಿಂದ ಕೇಳಿ ಬರುತ್ತಿರುವುದು ಚೇತನಾಳ ಧ್ವನಿ ಎಂಬುದು ಖಚಿತವಾಗುತ್ತಿರುವಂತೆ ಕುಳಿತಲ್ಲಿಂದ ಛಂಗನೆ ಎದ್ದು ಅತ್ತ ಧಾವಿಸತೊಡಗಿದ. ತಕ್ಷಣ ಟೇಬಲ್ಲಿನ ಹಿಂದಿನ ಪೊಲೀಸ್ ಎದ್ದು ನಿಂತು ಅಲ್ಲೇ ಕೂರುವಂತೆ ಸೂಚಿಸಿದ. ''ಮೈ ವೈಫ್... ಮೈ ವೈಫ್...'' ಎನ್ನುತ್ತಾ ಮುಂದುವರಿಯಲು ಚಂದ್ರಕಾಂತ ಪ್ರಯತ್ನಿಸುತ್ತಿರುವಂತೆ ತನ್ನ ಜಾಗದಿಂದ ಎದ್ದು ಬಂದ ಪೊಲೀಸ್ ಚಂದ್ರಕಾಂತನ ಎದೆಗೆ ಕೈಯ್ಯಿಟ್ಟು ಹಿಂದಕ್ಕೆ ತಳ್ಳಿ ಸುಮ್ಮನೇ ಕುಳಿತಿರುವಂತೆ ಆಗ್ರಹಿಸಿದ. 'ಮಿಸುಕಾಡಿದರೆ ಎರಡು ತದುಕುತ್ತೇನೆ' ಎನ್ನುವಂತಿತ್ತು ಆತನ ಹಾವ ಭಾವ. ಏನು ಮಾಡುವುದೆಂದು ತೋಚದೇ ಚಡಿಪಡಿಸುತ್ತ ಬೆಂಚಿನಮೇಲೆ ಹೋಗಿ ಕುಳಿತ ಚಂದ್ರಕಾಂತ. ಹೊರಗೆ ನಡೆಯುತ್ತಿರುವ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿತ್ತು ಆತನಿಗೆ. ಕುಳಿತಲ್ಲಿಂದಲೇ ಬಾಗಿ ಬಾಗಲಿನತ್ತ ಇಣುಕಿ ನೋಡಲು ಪ್ರಯತ್ನಿಸಿದ. ಅಲ್ಲಿಯ ಕೆಲ ಭಾಗವಷ್ಟೇ ಕಾಣುತ್ತಿತ್ತು. ಚೇತನಾ ಕಾಣಿಸುತ್ತಿರಲಿಲ್ಲ.

ಹೊರಗಡೆ ಮಾತಿನ ಚಕಮಕಿ ಜೋರಾಗಿಯೇ ನಡೆಯುತ್ತಿತ್ತು. ಅವರೆಲ್ಲರ ಅರ್ಥವಾಗದ ಮಾತುಗಳಿಗೆ ಈಕೆ ''ನನ್ನ ಗಂಡನನ್ನು ಬಿಟ್ಟು ಬಿಡಿ'' ಎಂದೊಂದೇ ಪದೇ ಪದೇ ಹೇಳುತ್ತಿದ್ದಳು. ಮಾತಿನ ನಡುವೆಯೇ ಎದುರಿರುವ ಟೇಬಲ್ಲಿನ ಮೇಲಿದ್ದ ಚಾಕುವೊಂದನ್ನು ಸಟಕ್ಕನೆ ಎಳೆದುಕೊಂಡು ಗಟ್ಟಿಯಾಗಿ ಕಣ್ಮುಚ್ಚಿ ಎಡಗೈ ಮೇಲ್ಭಾಗವನ್ನು ಎರಡೆರಡು ಬಾರಿ ಕುಯ್ದುಕೊಂಡು ಬಿಟ್ಟಳು. ರಕ್ತ ಟೇಬಲ್ಲಿನಮೇಲೂ ತೊಟ್ಟಿಕ್ಕತೊಡಗಿತು. 'ಆss' ಎಂದು ಚೀರುತ್ತಾ ಮೂರನೇ ಬಾರಿಗೆ ಚಾಕುವನ್ನು ಕೈಯ್ಯತ್ತ ಆಕೆ ಒಯ್ಯುತ್ತಿರುವಂತೇ, ಈ ಅನಿರೀಕ್ಷಿತ ಘಟನೆಯ ಆಘಾತದ ನಡುವೆಯೂ ಚೇತರಿಸಿಕೊಂಡ ಪೊಲೀಸನೊಬ್ಬ ತಕ್ಷಣ ಆಕೆಯ ಹತ್ತಿರ ಧಾವಿಸಿ ಕೈಯ್ಯನ್ನು ಗಟ್ಟಿಯಾಗಿ ಹಿಡಿದು ಚಾಕುವನ್ನು ಕಸಿದುಕೊಂಡ. ಮತ್ತಿಬ್ಬರು ಲಗುಬಗೆಯಿಂದ ಫಸ್ಟ್‌ಏಡ್ ಪೆಟ್ಟಿಗೆ ತೆಗೆದುಕೊಂಡು ಬಂದರು.

ಚೇತನಾಳ ಚೀತ್ಕಾರ, ನಡೆಯುತ್ತಿರುವ ಗಲಾಟೆ ಕೇಳಿದ ಚಂದ್ರಕಾಂತ ಹೊರಗೆ ಬರಲು ಧಾವಿಸುತ್ತಿರುವಂತೆಯೇ ಅಲ್ಲಿಯ ಪೊಲೀಸ್ ಆತನನ್ನು ಮತ್ತೆ ತಡೆದ. ಆದರೆ ಕೆಲವೇ ಕ್ಷಣದಲ್ಲಿ ಹೊರ ಕೋಣೆಯಲ್ಲೇನು ನಡೆಯುತ್ತಿದೆ ಎನ್ನುವ ಕುತೂಹಲ ಹತ್ತಿಕ್ಕಿಕೊಳ್ಳಲಾಗದೇ ಹೊರಬಂದ. ಪೊಲೀಸನ ಹಿಂದೆಯೇ ಚಂದ್ರಕಾಂತನೂ ಬಂದ. ಆಗಲೇ ಚೇತನಾಳ ಕೈಗೆ ಹತ್ತಿ, ಔಷಧಿ, ಮೂರ್ನಾಲ್ಕು ಸುತ್ತು ಬ್ಯಾಂಡೇಜ್ ಸುತ್ತಿ ರಕ್ತ ನಿಲ್ಲಿಸಲು ಸಫಲರಾಗಿದ್ದರು ಪೊಲೀಸರು. ಏನಾಯಿತೆನ್ನುತ್ತ ಆತಂಕದಿಂದ ಅವಳತ್ತ ಧಾವಿಸಿದ ಚಂದ್ರಕಾಂತ. ಆತನನ್ನು ನೋಡುತ್ತಲೇ ಸಣ್ಣದೊಂದು ಸಮಾಧಾನದ ಎಳೆ ಚೇತನಾಳ ಮುಖದಲ್ಲಿ ಮೂಡಿತು. ಆಕೆಯ ಕೈಗೆ ಬ್ಯಾಂಡೇಜ್